**ಪಾಠ–5** **ಜನವರಿ 23–29**

# ಸಮಾಧಾನದ ಉದಾತ್ತಪ್ರಭು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 9:1–5; ಯೆಶಾಯ 9:6,7; ಯೆಶಾಯ 9:8–10; ಯೆಶಾಯ 11ನೇ ಅಧ್ಯಾಯ ಮತ್ತು ಯೆಶಾಯ 12:1–6 ವಚನಗಳು.

**ಸ್ಮರಣ ವಾಕ್ಯ : "ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲೆ ಇರುವುದು; ಅದ್ಭುತ ಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು"** – (ಯೆಶಾಯ 9:6).

ಡಾ॥ ರಾಬರ್ಟ್ ಓಪೆನೆಮರ್‌ರವರು ಪ್ರಪಂಚದ ಮೊದಲ ಅಣುಬಾಂಬ್ ತಯಾರಿಕೆಯ ಮೇಲ್ವಿಚಾರಕರಾಗಿದ್ದರು, ಅಮೇರಿಕ ಸಂಯುಕ್ತ ಸಂಸ್ಥಾನದ ಕಾಂಗ್ರೆಸಿನ ಸಮಿತಿಯ ಮುಂದೆ ನಿಂತಾಗ ಸಮಿತಿಯು ಅಣುಬಾಂಬನ್ನು ಕುರಿತು ಇದಕ್ಕೆ ಪ್ರತಿಯಾಗಿ ನಮಗೆ ರಕ್ಷಣೆ ನೀಡುವ ಯಾವುದಾದರೂ ಅಸ್ತ್ರವು ಲೋಕದಲ್ಲಿದೆಯೇ? ಎಂದು ಪ್ರಶ್ನಿಸಿತು– ಅದಕ್ಕೆ ಅವರು ಖಂಡಿತವಾಗಿ ಇದೆ ಎಂದು ಉತ್ತರಕೊಟ್ಟರು. ಅದೇನೆಂದರೆ ಎಂದು ಡಾ॥ ಒಪೆನೀಮರ್ ಸುತ್ತಲು ಕುಳಿತವರನ್ನು ನೋಡುತ್ತಾ ಮೃದುವಾಗಿ ಶಾಂತಿ (ಸಮಾಧಾನ) ಎಂಬ ಅಸ್ತ್ರವು ಎಂದು ಹೇಳಿದರು– Signs of the time - 1985ರಲ್ಲಿ ಪ್ರಕಾಶಿತವಾದ 7,000 ನಿದರ್ಶನಗಳ ವಿಶ್ವಕೋಶ, ಪುಟ 989.

* ಈ ವಾರದ ಪಾಠವನ್ನು ಜನವರಿ 30ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಮಾನವ ಕುಲಕ್ಕೆ ಶಾಂತಿ ಎಂಬುದು ಕೈಗೆ ಸಿಗದ ಒಂದು ಕನಸಾಗಿದೆ. ದಾಖಲಿತ ಚರಿತ್ರೆಯ ಆರಂಭದಿಂದ ಲೆಕ್ಕಹಾಕಿದಾಗ ಪ್ರತಿಶತ 8 ಭಾಗದ ಕಾಲವು ಮಾತ್ರ ಶಾಂತಿಯಿಂದ ಕೂಡಿತ್ತೆಂದು ತಿಳಿಯುತ್ತದೆ. ಇದುವರೆಗೆ ಸುಮಾರು 8,000 ಶಾಂತಿ ಒಪ್ಪಂದಗಳು ಮುರಿಯಲ್ಪಟ್ಟಿವೆ. ಮೊದಲ ಪ್ರಪಂಚ ನಡೆದ ಬಳಿಕ ಸುಮಾರು 50 ವರ್ಷಗಳ ಅವಧಿಯಲ್ಲಿ ಪ್ರತಿವರ್ಷಕ್ಕೆ 2 ನಿಮಿಷಗಳ ಶಾಂತಿ ಇತ್ತು ಎಂದು ಹೇಳಬಹುದು.

ಕ್ರಿ.ಶ. 1895ರಲ್ಲಿ ಆಲ್‌ಫ್ರೆಡ್ ನೋಬಲ್, ಇವರು ಸಿಡಿಮದ್ದನ್ನು ಕಂಡುಹಿಡಿದವರು ಪ್ರಪಂಚದ ಶಾಂತಿಗಾಗಿ ವೈಯಕ್ತಿಕವಾಗಿ ಮಹತ್ವದ ಕೊಡುಗೆ ಕೊಟ್ಟವರಿಗೆ ಬಹುಮಾನ ನೀಡುವ ಸಂಸ್ಥೆಯನ್ನು (ದತ್ತಿಯನ್ನು) ಸ್ಥಾಪಿಸಿದರು. ವಿಷಯವೇನೆಂದರೆ ಶಾಂತಿಗಾಗಿ ನೋಬಲ್ ಬಹುಮಾನ ಗೆದ್ದವರೂ ಸಹಾ ಹಿಂಸಾತ್ಮಕ ಕಲಹಗಳಲ್ಲಿ ಒಳಗೊಂಡಿದ್ದಾರೆ.

ಈ ವಾರ ನಾವು ನಿಜವಾದ ಶಾಶ್ವತ ಶಾಂತಿಯನ್ನು ಸ್ಥಾಪಿಸಬಲ್ಲ ಒಬ್ಬನೇ ಒಬ್ಬಾತನ ಬಗ್ಗೆ ಓದುತ್ತೇವೆ.

**ಭಾನುವಾರ** **ಜನವರಿ 24**

## ಗಲಿಲಾಯದ ಕತ್ತಲು ಕೊನೆಯಾಗುವುದು (ಯೆಶಾಯ 9:1–5)

ಯೆಶಾಯ 9ನೇ ಅಧ್ಯಾಯದ ಒಂದನೇ ವಚನವು ಇದಕ್ಕೆ ಮುಂದಾಗಿ ಬರುವ ವಚನಕ್ಕೆ ವ್ಯತಿರಿಕ್ತವಾಗಿದೆ ಎಂಬುದನ್ನು ಸೂಚಿಸುವ "ಆದರೆ" ಎಂಬ ಪದದಿಂದ ಆರಂಭವಾಗುತ್ತದೆ ಏಕೆ?

ಯೆಶಾಯ 8:21,22 ವಚನಗಳು ನಿಜವಾದ ದೇವರನ್ನು ಬಿಟ್ಟು ಮಾಟಮಂತ್ರ ಮತ್ತು ಇತರ ಆಚರಣೆಗೆ ತಿರುಗಿಕೊಂಡವರ ಹೀನಾಯ ಸ್ಥಿತಿಯನ್ನು ವಿವರಿಸುತ್ತದೆ. ಎತ್ತ ನೋಡಿದರೂ ಬರೀ ಕಷ್ಟಸಂಕಟ ಅಂಧಕಾರಗಳೇ ಜನರಿಗೆ ಕಾಣಿಸುತ್ತದೆ. ಅಲ್ಲಿಂದ ಜನರು ಮತ್ತೆ ಕಾರ್ಗತ್ತಲಿಗೆ ತಳ್ಳಲ್ಪಡುತ್ತಾರೆ (ಯೆಶಾಯ 8:22). ಇದಕ್ಕೆ ಪ್ರತಿಯಾಗಿ ಸಂಕಟಪಟ್ಟವರ ಅಂಧಕಾರವು ಕಳೆದುಹೋಗುವ ಕಾಲವು ಬರುತ್ತದೆ (ಯೆಶಾಯ 9:1) ಗಲಿಲಾಯ ಪ್ರಾಂತದ ಜನರು "ದೊಡ್ಡ ಬೆಳಕಿನ" ವಿಶೇಷವಾದ ಆಶೀರ್ವಾದವನ್ನು ವಿಂಗಡವಾಗಿ ಪಡೆದುಕೊಳ್ಳುತ್ತಾರೆ (ಯೆಶಾಯ

9:2). ದೇಶದ ಜನರು ವೃದ್ಧಿಗೊಂಡು ಅವರ ಭಾರವಾದ ನೊಗವನ್ನು ಮುರಿದು ಬಿಟ್ಟಿದ್ದರಿಂದ ಆನಂದಿಸುತ್ತಾರೆ (ಯೆಶಾಯ 9:4).

ಗಲಿಲಾಯ ಸಮುದ್ರ ಪ್ರಾಂತ್ಯವನ್ನು ಇಲ್ಲಿ ವರ್ಣಿಸಿರುವುದು ಯಾಕೆಂದರೆ, ಅಹಾಜನು ಸಹಾಯಕ್ಕಾಗಿ ಅಶ್ಶೂರದ ಅರಸನಾದ ಮೂರನೇ ತಿಗ್ಲತ್ಪಿಲೆಸರ್‌ನನ್ನು ಮೊರೆಹೋದಾಗ ಆತನ ಸೈನ್ಯವು ಮೊಟ್ಟ ಮೊದಲಿಗೆ ಗಲಿಲಾಯವನ್ನು ಇಸ್ರಾಯೇಲರಿಂದ ವಶಪಡಿಸಿಕೊಂಡಿತು. ಮೊದಲು ವಶಕ್ಕೆ ಒಳಪಟ್ಟದ್ದರಿಂದ ಮೊದಲು ಬಿಡುಗಡೆ ಹೊಂದಬೇಕಾದ ಪ್ರಯುಕ್ತ ಗಲಿಲಾಯ ಪ್ರಾಂತ್ಯವನ್ನು (2 ಅರಸುಗಳು 15:29) ಯೆಶಾಯನು ಇಲ್ಲಿ ಉಲ್ಲೇಖ ಮಾಡಿದ್ದಾನೆ.

ದೇವರು ತನ್ನ ಜನರನ್ನು ಬಿಡುಗಡೆ ಮಾಡಲು ಯಾರನ್ನು ಉಪಯೋಗಿಸಿದನು? (ಯೆಶಾಯ 9:6,7).

ಯಾವಾಗ ಮತ್ತು ಹೇಗೆ ಯೆಶಾಯ 9:1–5ರಲ್ಲಿರುವ ಪ್ರವಾದನೆ ನೆರವೇರಿತು? (ಮತ್ತಾಯ 4:12–25).

ಯೇಸುವಿನ ಸೇವೆಯು ಗಲಿಲಾಯ ಪ್ರಾಂತ್ಯದಿಂದ ಪ್ರಾರಂಭವಾದದ್ದು. ಕೇವಲ ಆಕಸ್ಮಿಕವಾದುದಲ್ಲ. ಇಲ್ಲಿಯೇ ಆತನು ಜನರರೋಗಗಳನ್ನು ವಾಸಿ ಮಾಡುತ್ತಾ ದೆವ್ವಹಿಡಿದವರನ್ನು ವಾಮಾಚಾರದ ಬಂಧನದಿಂದ ಬಿಡಿಸುತ್ತಾ ಪರಲೋಕದ ಸುವಾರ್ತೆಯನ್ನು ಸಾರಿ ಆ ಸೀಮೆಯ ಜನರಿಗೆ ನಿರೀಕ್ಷೆಯನ್ನು ಕೊಟ್ಟನು (ಮತ್ತಾಯ 4:24). ಸತ್ಯವೇದದಲ್ಲಿ ಹಳೆಯ ಒಡಂಬಡಿಕೆಯಲ್ಲಿ ಮುಂದಾಗಿ ಹೇಳಿರುವ ಘಟನೆಗಳು ಹೊಸ ಒಡಂಬಡಿಕೆಯ ಕಾಲದಲ್ಲಿ ಹೇಗೆ ನೆರವೇರಿದವು ಎಂಬುದಕ್ಕೆ ಪರಿಪೂರ್ಣ ಉದಾಹರಣೆಗಳನ್ನು ನಾವು ಇಲ್ಲಿ ನೋಡಬಹುದಾಗಿದೆ. ಕರ್ತನು ಒಂದು ಯುಗದ ಚಿತ್ರಗಳನ್ನು ಇನ್ನೊಂದು ಯುಗದಲ್ಲಿ ನಡೆಯುವ ಘಟನೆಗಳೊಂದಿಗೆ ಸೇರಿಸಿ ಹೇಳುತ್ತಾನೆ. ಮತ್ತಾಯ 24ನೇ ಅಧ್ಯಾಯದಲ್ಲಿ ಯೇಸುವು ಕ್ರಿ.ಶ.70ನೇ ವರ್ಷದಲ್ಲಿ ನಡೆಯುವ ಯೆರೂಸಲೇಮಿನ ನಾಶನವನ್ನು ಅಂತ್ಯಕಾಲದಲ್ಲಿ ನಡೆಯುವ ಲೋಕದ ನಾಶದ ಜೊತೆಗೆ ಸಮೀಕರಿಸಿ ಹೇಳುತ್ತಾನೆ.

ಯಾರಾದರೂ ಯೇಸುವು ನಿಮ್ಮನ್ನು ಯಾವುದರಿಂದ ಬಿಡಿಸಿದ್ದಾನೆ ಎಂದು ಪ್ರಶ್ನೆ ಕೇಳಿದರೆ ನಿಮ್ಮ ಉತ್ತರವೇನಾಗಿರುತ್ತದೆ? ನಿಮ್ಮ ಜೀವಿತದಲ್ಲಿ ನೀವು ವೈಯಕ್ತಿಕವಾಗಿ ಯೇಸುಕ್ರಿಸ್ತನ ಶಕ್ತಿಯ ಬಗ್ಗೆ ಎಂತಹ ಸಾಕ್ಷಿಯನ್ನು ಕೊಡಬಲ್ಲಿರಿ?

**ಸೋಮವಾರ** **ಜನವರಿ 25**

## ನಮಗಾಗಿ ಹುಟ್ಟಿದ ಮಗು (ಯೆಶಾಯ 9:6,7)

ಇಲ್ಲಿ ಯೆಶಾಯನ ಪುಸ್ತಕದ ಮೂರನೇ ಮಗುವಿನ ವಿಶೇಷ ಜನನದ ಬಗ್ಗೆ ಹೇಳುತ್ತದೆ. ಇದಕ್ಕೂ ಮೊದಲು ಇಮ್ಮಾನುವೇಲ ಮತ್ತು ಮಹೇಶ್ ಶಾಲೂಲ್ ಹಾಷ್‌ಬಜ್ ಎಂಬ ಎರಡು ಮಕ್ಕಳು ವಿಶೇಷ ಜನನವನ್ನು ನೋಡುತ್ತೇವೆ.

ಈ ವಚನಗಳಲ್ಲಿ ಮಗುವಿನ ವಿಷಯದಲ್ಲಿ ಕಂಡುಬರುವ ವಿಶೇಷತೆ ಏನು? (ಯೆಶಾಯ 9:6,7).

ಈ ವಿಮೋಚಕನನ್ನು ಹಲವು ಹೆಸರುಗಳು ಮತ್ತು ಬಿರುದುಗಳಿಂದ ವರ್ಣಿಸಿರುವುದನ್ನು ಗಮನಿಸುತ್ತೇವೆ. ಪುರಾತನ ಕಾಲದ ಪೂರ್ವ ದೇಶಗಳಲ್ಲಿ ರಾಜರಿಗೆ ಮತ್ತು ದೇವತೆಗಳಿಗೆ ಅವರ ಮಹತ್ವವನ್ನು ತೋರಿಸಲು ನಾನಾ ಹೆಸರುಗಳು ಇರುತ್ತಿದ್ದವು.

ಸಂಸೋನನ ತಂದೆಯಾದ ಮಾನೋಹನಿಗೆ ಕಾಣಿಸಿಕೊಂಡ ದೇವದೂತನು ತನ್ನ ಹೆಸರು ಆಶ್ಚರ್ಯವಾದದ್ದು (ಅದ್ಭುತ) ಎಂದು ಹೇಳಿದ ಹಾಗೆಯೇ ಈ ಮಗುವಿನ ಹೆಸರೂ ಸಹಾ ಅದ್ಭುತ ಸ್ವರೂಪನು ಎಂಬುದಾಗಿ ವರ್ಣಿಸಲ್ಪಟ್ಟಿದೆ (ನ್ಯಾ.ಸ್ಥಾ.13:18).

ಈ ಎರಡೂ ಸಂದರ್ಭದಲ್ಲಿ ಬಂದಿರುವ ಇಬ್ರಿಯ ಮೂಲಪದವು ಒಂದೇ ಆಗಿದೆ. ನಂತರ ಈ ದೇವದೂತನು ಯಜ್ಞವೇದಿಯಿಂದ ಆಕಾಶಕ್ಕೆ ಏರಿ ಹೋಗುತ್ತಿರುವ ಅಗ್ನಿಜ್ವಾಲೆಯೊಳಗೆ ಮೇಲಕ್ಕೇರಿ ಹೋದನು ಎಂಬುದು ಆತನು ಸಾವಿರ ವರ್ಷಗಳ ಬಳಿಕ ಯಜ್ಞದ ಕುರಿಯಾಗಿ ಸಮರ್ಪಿತನಾಗುವುದನ್ನು ಪೂರ್ವಭಾವಿಯಾಗಿ ತಿಳಿಸಿದ್ದಾನೆ (ನ್ಯಾಯ 13:20).

ಆತನನ್ನು ಪರಾಕ್ರಮಿಯಾದ ದೇವರು ಮತ್ತು ನಿತ್ಯನಾದ ತಂದೆಯೆಂದು

ಕುರಿತು ಹೇಳಲಾಗಿದೆ. ಲೂಕ 3:38ನ್ನು ನೋಡಿರಿ. ಆದಮನು ದೇವರ ಮಗನು ಎಂದು ಬರೆದಿದೆ. ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವುದು. ದಾವೀದನ ರಾಜ್ಯದಲ್ಲಿ ನಿತ್ಯಸಮಾಧಾನವಿರುವುದು.

ಈ ಎಲ್ಲಾ ಗುಣಗಳನ್ನು ಆರೋಪಿಸಲು ಅರ್ಹನಾದ ಏಕೈಕ ಮಗು ಯಾವುದಾಗಿರಲು ಸಾಧ್ಯ? (ಲೂಕ 2:8–14ನ್ನು ನೋಡಿರಿ).

ಕೆಲವರು ಇದನ್ನು ಹಿಜ್ಕೀಯನೆಂದು ಗುರುತಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಇದು ಸಾಮಾನ್ಯ ಮನುಷ್ಯನನ್ನು ಮೀರುವ ವರ್ಣನೆಯಾಗಿದೆ. ದೇವಪುತ್ರನಾದ ಮತ್ತು ಸೃಷ್ಟಿಕರ್ತನಾದ ಯೇಸುಕ್ರಿಸ್ತನು ಮಾತ್ರ ಈ ವರ್ಣನೆಗೆ ಅರ್ಹನಾಗಿದ್ದಾನೆ (ಯೋಗ್ಯನಾಗಿದ್ದಾನೆ) (ಯೋಹಾನ 1:1–3, 14 ಮತ್ತು ಕೊಲಸ್ಸೆ 1:5–17 ಮತ್ತು ಕೊಲಸ್ಸೆ 2:9 ಮತ್ತು ಇಬ್ರಿಯ 1:2). ನಮ್ಮನ್ನು ರಕ್ಷಿಸುವ ಸಲುವಾಗಿ ಮತ್ತು ನಮಗೆ ಸಮಾಧಾನ ಕೊಡುವುದಕ್ಕಾಗಿ ಹುಟ್ಟಿಬಂದವನಾರು? ಪರಲೋಕದಲ್ಲಿಯೂ ಮತ್ತು ಭೂಲೋಕದಲ್ಲಿಯೂ ಇರುವ ಎಲ್ಲಾ ಅಧಿಕಾರವನ್ನು ಈತನು ಪಡೆದುಕೊಂಡಿದ್ದಾನೆ ಮತ್ತು ನಮ್ಮೊಂದಿಗೆ ನಿತ್ಯಕ್ಕೂ ಇರುವವನಾಗಿದ್ದಾನೆ. ತನ್ನ ದೈವತ್ವವನ್ನು ಉಳಿಸಿಕೊಂಡು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪಪಡುವ ಮಾನವನಾಗಿ ನಮ್ಮೊಂದಿರುತ್ತಾನೆ. "ನಮಗೋಸ್ಕರ ಒಂದು ಮಗುವು ಹುಟ್ಟಿದೆ" ಅದು ಎಂದೆಂದಿಗೂ ಇರುತ್ತದೆ.

"ಯೇಸುಕ್ರಿಸ್ತನು ಈ ಲೋಕಕ್ಕೆ ಬಂದಾಗ ಸೈತಾನನು ಈ ಭೂಮಿಯ ಮೇಲಿದ್ದನು ಮತ್ತು ಕ್ರಿಸ್ತನು ಹುಟ್ಟಿದಂದಿನಿಂದ ಮೊದಲುಗೊಂಡು ಕಲ್ವಾರಿಯವರೆಗೆ ಪ್ರತಿ ಸಾಗಿಸಿದ ಪ್ರಯಣದ ಪ್ರತಿಯೊಂದು ಹೆಜ್ಜೆ ಹೆಜ್ಜೆಯಲ್ಲೂ ಆತನಿಗೆ ತೊಂದರೆ ಕೊಟ್ಟನು (ಅಡ್ಡಿಪಡಿಸಿದನು). ದೂತರು ಯಾವಾಗಲೂ ತಮ್ಮನ್ನು ತಾವು ನಿರಾಕರಿಸಿಕೊಂಡು ದೇವರನ್ನು ಕಟ್ಟುನಿಟ್ಟಿನಿಂದ ಸೇವಿಸುತ್ತಲೇ ಇರಬೇಕೆಂದು ಇಲ್ಲದಿದ್ದರೆ ದೇವರು ಸಹಿಸುವವನಲ್ಲವೆಂದು ಆತನ ಮೇಲೆ ಸೈತಾನನು ಆರೋಪ ಹೊರಿಸಿದನು. ಈ ಸೈತಾನನಿಗೆ ಸ್ವನಿರಾಕರಣೆ ಎಂದರೆ ಏನೆಂಬುದು ಗೊತ್ತಾಗುವ

ಮೊದಲೇ ಎಂದೆಂದಿಗೂ ತ್ಯಾಗವನ್ನೇ ಮಾಡದಿದ್ದ ಸೈತಾನನು ಪರಲೋಕದ ದೇವರ ಮೇಲೆ ಈ ಆರೋಪವನ್ನು ಮಾಡಿದನು.

ಅನಂತರ ಈ ಕೆಡುಕನು ಪರಲೋಕದಿಂದ ದೊಬ್ಬಲ್ಪಟ್ಟಾಗಿನಿಂದ ಕರ್ತನನ್ನು ಸೇವೆ ಪಡೆದುಕೊಳ್ಳುವುದರಲ್ಲಿ ಬಹಳ ನಿಷ್ಠುರನು ಆದರೆ ಇನ್ನೊಬ್ಬರಿಗೆ ಸೇವೆ ನೀಡಲಾರನು ಎಂಬ ಆರೋಪವನ್ನು ಮುಂದುವರೆಸುತ್ತಾ ಬಂದನು. ಅದಕ್ಕಾಗಿ ಕ್ರಿಸ್ತನು ಅವನ ಸುಳ್ಳು ಆರೋಪಗಳಿಗೆ ಸರಿಯಾದ ಉತ್ತರವನ್ನು ಕೊಡಲು ಮತ್ತು ತಂದೆಯಾದ ದೇವರ ಸ್ವಭಾವವನ್ನು ವಿಶ್ವಕ್ಕೆ ತೋರಿಸಲು ಈ ಲೋಕಕ್ಕೆ ಬಂದನು" – ಎಲೆನ್ ಜಿ ವೈಟಮ್ಮನವರ ಸೆಲೆಕ್ಟೆಡ್ ಮೆಸೇಜಸ್ ಪುಸ್ತಕದ ಪುಟ 406, 407.

ಈ ಮೇಲಿನ ಉಲ್ಲೇಖವು ದೇವರ ಸ್ವಭಾವದ ಬಗ್ಗೆ ನಮಗೆ ಏನನ್ನು ಹೇಳುತ್ತದೆ?

**ಮಂಗಳವಾರ** **ಜನವರಿ 26**

## ದೇವರ ಕೋಪದ ಕೋಲು

ಕಷ್ಟ ಬಂದಾಗ ದೇವರ ಮೇಲೆ ಭರವಸೆ ಇಡದೆ ವಾಮಾಚಾರಗಳ ಮೇಲೆ ಭರವಸೆಯಿಟ್ಟ ಪ್ರಯುಕ್ತ ಅಶ್ಶೂರ್ಯರನ ಸೇನೆಯ ಬಲದ ಆಕ್ರಮಣಕ್ಕೆ ತುತ್ತಾಗಿ ಕಾರ್ಗತ್ತಲೆಯಲ್ಲಿ ಸಂಕಟದಲ್ಲಿ ಬಿದ್ದಿರುವವರ ವಿಮೋಚನೆಯ ಭವಿಷ್ಯವನ್ನು ಯೆಶಾಯ 9:1–5 ವಚನಗಳು ವಿವರಿಸುತ್ತದೆ.

ಮೇಲಿನ ವಚನಗಳಲ್ಲಿ ವಿವರಿಸಿರುವ ದೇವಜನರು ಪಡುವ ಕಷ್ಟಸಂಕಟಗಳನ್ನು ಓದಿರಿ. ಇದನ್ನು ಯಾಜಕಕಾಂಡ 26:14–39 ವಚನಗಳಲ್ಲಿರುವ ಶಾಪಗಳಿಗೆ ಹೋಲಿಸಿ ನೋಡಿರಿ. ದೇವರು ತನ್ನ ಜನರನ್ನು ಒಮ್ಮೆಲೆ ಶಿಕ್ಷಿಸದೆ ಹಂತ ಹಂತವಾಗಿ ಶಿಕ್ಷಿಸುತ್ತಾ ಹೋದನು ಏಕೆ? ಆತನ ಸ್ವಭಾವ ಮತ್ತು ಲಕ್ಷ್ಯಗಳ ವಿಷಯದಲ್ಲಿ ಇದು ನಮಗೆ ಏನನ್ನು ತಿಳಿಸುತ್ತದೆ?

ದೇವರು ತನ್ನ ಜನರನ್ನು ನಾಶಪಡಿಸಬೇಕಾಗಿದ್ದಲ್ಲಿ ಅವರನ್ನು ಅಶ್ಶೂರ್ಯರಿಗೆ ಒಪ್ಪಿಸಿಕೊಡುತ್ತಿದ್ದನು. ಆದರೆ ದೇವರು ದೀರ್ಘಶಾಂತನು **"ಆತನು ಯಾರು**

**ನಾಶವಾಗದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುತ್ತಾನೆ**" (2 ಪೇತ್ರ 3:9). ನ್ಯಾಯಾಧಿಪತಿಗಳ ಕಾಲಾವಧಿಯಲ್ಲಿ ದೇವರು ಯೆಹೂದ್ಯರನ್ನು, ಇಸ್ರಾಯೇಲ್ಯರನ್ನು ತಮ್ಮ ತಪ್ಪಿನ ಫಲಗಳನ್ನು ಅನುಭವಿಸುವಂತೆ ಮತ್ತು ತಾವು ಏನು ಮಾಡುತ್ತಿದ್ದರು ಎಂಬುದನ್ನು ಅರಿತು ಉತ್ತಮವಾದ ಆಯ್ಕೆಯನ್ನು ಮಾಡಿಕೊಳ್ಳುವ ಅವಕಾಶವನ್ನು ಉಪಯೋಗಿಸಿಕೊಳ್ಳುವಂತೆ ಅವರನ್ನು ಅವರಷ್ಟಕ್ಕೆ ಬಿಟ್ಟಿದ್ದನು.

ಆದರೆ ಅವರು ಕೆಟ್ಟದ್ದನ್ನು ತೊರೆಯದೆ ದೇವರು ತನ್ನ ಸಂದೇಶಕರ ಮೂಲಕ ಕೊಟ್ಟ ಸಂದೇಶಗಳನ್ನು ಕೇಳಿಸಿಕೊಳ್ಳದೆ ತಮ್ಮ ಹೃದಯಗಳನ್ನು ಕಠಿಣ ಪಡಿಸಿಕೊಂಡಾಗ ಆತನು ಅವರ ಸಂರಕ್ಷಣೆಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದನು. ಆದರೆ ಅವರು ಆತನಿಗೆ ಎದುರುಬಿದ್ದು ಮತ್ತೆ ಮತ್ತೆ ದುಷ್ಟತ್ವವನ್ನು ನಡೆಸುತ್ತಾ ದೇವರು ಅವರನ್ನು ಏನೂ ಮಾಡಲಾಗದಷ್ಟು ಕೀಳುಮಟ್ಟವನ್ನು ಮುಟ್ಟುತ್ತಿದ್ದರು.

ಯೆಶಾಯ 9:8–12 ವಚನಗಳನ್ನು ಓದಿರಿ. ಯಾವ ಪಾಪಗಳ ದೆಸೆಯಿಂದ ಜನರು ಅಪರಾಧಿಗಳಾಗಿದ್ದರು? ಯಾರ ವಿರೋಧವಾಗಿ ಅವರು ಪಾಪಗಳನ್ನೆಸಗಿದ್ದರು? ಅವರುಗಳಲ್ಲಿ ಅಪರಾಧಿಗಳು ಯಾರಾಗಿದ್ದರು?

ಇಲ್ಲಿ ನಾವು ಏನನ್ನು ನೋಡುತ್ತೇವೆಯೋ ಅದನ್ನೇ ಸತ್ಯವೇದದಾದ್ಯಂತ ಆಯ್ಕೆಯ ಸ್ವಾತಂತ್ರ್ಯದ ವಾಸ್ತವತೆಯನ್ನು ನೋಡುತ್ತೇವೆ. ದೇವರು ಮನುಷ್ಯರಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ (ಅದನ್ನು ಆತನು ಕೊಡದಿದ್ದರೆ ನಾವು ನಿಜವಾಗಿ ಆತನನ್ನು ಪ್ರೀತಿ ಮಾಡುವುದಕ್ಕಾಗುತ್ತಿರಲ್ಲ). ಆಯ್ಕೆಯ ಸ್ವಾತಂತ್ರ್ಯವು ಒಬ್ಬನು ಕೆಟ್ಟದ್ದನ್ನು ಮಾಡಬಲ್ಲ ಅವಕಾಶವನ್ನೂ ಸಹ ಒದಗಿಸಿಕೊಡುತ್ತದೆ. ದೇವರು ಎಡಬಿಡದೆ ನಮಗೆ ತನ್ನ ಪ್ರೀತಿಯ ಸ್ವಭಾವವನ್ನು ತೋರುಸುತ್ತಿದ್ದಾಗ್ಯೂ ನಾವು ತೆಗೆದುಕೊಂಡ ತಪ್ಪಾದ ನಿರ್ಧಾರಗಳಿಗೆ ತಕ್ಕ ಫಲಗಳನ್ನು ಅನುಭವಿಸುವುದಕ್ಕೆ ಎಡೆಮಾಡಿಕೊಡುತ್ತಿದ್ದನು; ನೋವು, ಸಂಕಟ ಭಯ, ಗಲಭೆ ಮುಂತಾದವುಗಳನ್ನು ಕೊಟ್ಟು ಆತನನ್ನು ಬಿಟ್ಟಾಗ ಏನಾಗುತ್ತದೆ ಎಂಬುದನ್ನು ನಾವು ಮನಗಾಣಲು ಸಹಾಯವಾಗುವಂತೆ ಮಾಡುತ್ತಾನೆ. ಆದಾಗ್ಯೂ, ಎಷ್ಟೋ ಸಲ ಇದರಿಂದಲೂ ಸಹ ಜನರು ತಮ್ಮ ಪಾಪಗಳನ್ನು

ಬಿಟ್ಟು ದೇವರ ಬಳಿಗೆ ಬರುವಂತೆ ಮಾಡಲು ಆಗುವುದಿಲ್ಲ. ಆಯ್ಕೆಯ ಸ್ವಾತಂತ್ರ್ಯವು ಬಹಳ ಅದ್ಭುತಕರವಾದುದು. ಅದಿಲ್ಲದೆ ನಾವು ಮಾನವರಾಗಿರಲು ಸಾಧ್ಯವಿಲ್ಲ. ಅದನ್ನು ಯಾರ್ಯಾರು ತಪ್ಪಾಗಿ ಉಪಯೋಗಿಸುತ್ತಾರೋ ಅವರನ್ನು ಅಯ್ಯೋ! ಅಕಟಾ ಎನ್ನಬೇಕಷ್ಟೆ.

ನಿಮ್ಮ ಸ್ವಂತ ಜೀವನದಲ್ಲಿ ದೇವರು ನಿಮ್ಮನ್ನು ಕೆಟ್ಟ ಮಾರ್ಗದಿಂದ ಬಿಡಿಸಿ ನಡೆಸುವುದಕ್ಕಾಗಿ ನಿಮ್ಮ ಮೇಲೆ ಕಷ್ಟಸಂಕಟಗಳನ್ನು ಹೇಗೆ ಉಪಯೋಗಿಸಿದ್ದಾನೆ?

**ಬುಧವಾರ** **ಜನವರಿ 27**

## ಬೇರು ಮತ್ತು ಚಿಗುರು (ಯೆಶಾಯ 11)

ಯೆಶಾಯ 11:1 ರಲ್ಲಿ "ಇಷಯ ಎಂಬ ಬುಡದಿಂದ ಬಂದ ಚಿಗುರು" ಎಂದು ಯಾರಿಗೆ ಹೇಳಾಗುತ್ತದೆ? (ಜೆಕರ್ಯ 3:8 ಮತ್ತು 6:12ನ್ನು ಸಹಾ ನೋಡಿರಿ).

ಯೆಶಾಯ 10:33ರಲ್ಲಿ ಕಡಿದುಹಾಕಿದ ಮರಬುಡದ ಚಿತ್ರವನ್ನು ನೋಡುತ್ತೇವೆ. ಇದರ ಮುಂದಿನ ಭಾಗವನ್ನು ಯೆಶಾಯ 11:1 ನೀಡುತ್ತದೆ. ದಾವೀದನು ಇಷಯನ ಮಗನಾಗಿರುವುದರಿಂದ "ಇಷಯನ ಬುಡ" ಎಂಬುದು ಅವನ ರಾಜ್ಯವು ಅಧಿಕಾರವನ್ನು ಕಳೆದುಕೊಂಡದ್ದನ್ನು ಪ್ರತಿನಿಧಿಸುತ್ತದೆ (ದಾನಿ 4:10–17 ಮತ್ತು 20–26 ವಚನಗಳು). ಆದರೆ ಬುಡದಿಂದ ಒಂದು ಚಿಗುರು ಒಡೆಯುವುದು ಎಂಬುದು ಅಧಿಕಾರ ಕಳೆದುಕೊಂಡು ಸುಸ್ಥಿತಿಯಲ್ಲಿರುವ ರಾಜ್ಯವನ್ನು ಆಳುವ ಆಡಳಿತಗಾರನು ದಾವೀದನ ವಂಶದಿಂದಲೇ ಬರುವುದನ್ನು ಹೇಳುತ್ತದೆ.

ದಾವೀದನ ಹೊಸರಾಜ್ಯವನ್ನು ಆಳುವವನನ್ನು "ಇಷಯನ ಬುಡ"ವೆಂತಲೂ ಕರೆದಿರುವುದು ಏಕೆ? (ಯೆಶಾಯ 11:10). ಇದು ಯಾವ ಅರ್ಥವನ್ನು ಕೊಡುತ್ತದೆ? (ಪ್ರಕ 22:16).

ಈ ವಿವರಣೆಯು ಯೇಸುಕ್ರಿಸ್ತನಿಗೆ ಮಾತ್ರ ಸರಿಹೊಂದುತ್ತದೆ. ಯಾಕೆಂದರೆ, ಆತನೇ ದಾವೀದ ವಂಶದ ಮೂಲನೂ ಮತ್ತು ಆತನ ವಂಶದಿಂದಲೇ ಬಂದ

ಸಂತಾನವೂ ಆಗಿದ್ದಾನೆ (ಲೂಕ 3:23–31). ಇವನು ಆದಾಮನ ಮಗನು; ಇವನು ದೇವರ ಮಗನು (ಲೂಕ 3:38). ಅಂದರೆ ಕ್ರಿಸ್ತನೇ ಅವನನ್ನು ಸೃಷ್ಟಿಸಿದವನು (ಯೋಹಾನ 1:1–3 ಮತ್ತು 14ನೇ ವಚನಗಳು). ಆದುದರಿಂದ ಕ್ರಿಸ್ತನು ದಾವೀದನ ಮೂಲಪುರುಷನೂ ಆತನ ಸಂತಾನವೂ ಆಗಿದ್ದಾನೆ.

ಯಾವ ರೀತಿಯಾಗಿ ದಾವೀದ ರಾಜ್ಯದ ಹೊಸ ಆಡಳಿತಗಾರನು ಪಾಪ ಮತ್ತು ಧರ್ಮಭ್ರಷ್ಟತೆಯ ಕೆಟ್ಟಫಲಿತಾಂಶಗಳನ್ನು ಹಿಮ್ಮೆಟ್ಟಿಸುತ್ತಾನೆ? (ಯೆಶಾಯ 11).

ಆತನು ದೇವರ ಚಿತ್ತಾನುಸಾರ ಆಲೋಚಿಸುತ್ತಾನೆ, ನ್ಯಾಯಸಮ್ಮತವಾಗಿ ತೀರ್ಪು ಕೊಡುತ್ತಾನೆ, ದುಷ್ಟರನ್ನು ಶಿಕ್ಷಿಸಿ ಶಾಂತಿ ಸಮಾಧಾನವನ್ನು ತರುತ್ತಾನೆ. ಆತನು ರಾಜ್ಯಾಧಿಕಾರವನ್ನು ತೆಗೆದುಕೊಂಡಾಗ ಇಸ್ರಾಯೇಲ್ಯರಲ್ಲಿ ಮತ್ತು ಯೆಹೂದ್ಯರಲ್ಲಿ ಉಳಿದವರನ್ನು ತಿರುಗಿತಂದು ಪುನರುಜ್ಜೀವನಗೊಳಿಸಿ ಒಂದುಗೂಡಿಸುತ್ತಾನೆ (ಯೆಶಾಯ 10:20–27 ವಚನಗಳಿಗೆ ಹೋಲಿಸಿರಿ). ದಾವೀದನು ಫಿಲಿಷ್ಟಿಯರನ್ನು ಮತ್ತು ಇನ್ನಿತರ ವೈರಿಗಳನ್ನು ಬಗ್ಗುಬಡಿದು ಬಲವಾದ ಮತ್ತು ಒಗ್ಗೂಡಿದ ರಾಜ್ಯವನ್ನು ಸ್ಥಾಪಿಸಿದ ಕಾಲದಲ್ಲಿದ್ದಂತೆಯೇ ಆಗಲೂ ಇರುತ್ತದೆ. ಈ ಹೊಸ ಆಡಳಿತಗಾರನು ದಾವೀದನಿಗಿಂತ ದೊಡ್ಡವನಾಗಿದ್ದು ಸೃಷ್ಟಿಯ ಕಾಲದಲ್ಲಿದ್ದ ಶಾಂತಿಯನ್ನು ಮತ್ತೆ ನೆಲೆಗೊಳಿಸುತ್ತಾನೆ; ಆವಾಗ ಕ್ರೂರಪ್ರಾಣಿಗಳು ಇನ್ನೆಂದಿಗೂ ಮಾಂಸಾಹಾರಿಗಳಾಗಿರುವುದಿಲ್ಲ. ಅವುಗಳು ತಾವು ಬೇಟೆಯಾಡಿ ತಿನ್ನುತ್ತಿದ್ದ ಪ್ರಾಣಿಗಳೊಂದಿಗೆ ಸಮಾಧಾನದಿಂದ ಜೀವಿಸುತ್ತವೆ (ಯೆಶಾಯ 11:6–9).

ಯೆಶಾಯ 11ನೇ ಅಧ್ಯಾಯವು ಯೇಸುಕ್ರಿಸ್ತನ ಮೊದಲನೇ ಬರೋಣದ ಬಗ್ಗೆ ಮಾತ್ರ ಮಾತಾಡುತ್ತದೆಯೇ? ಅಥವಾ ಆತನ ಎರಡನೇ ಬರೋಣದ ಬಗ್ಗೆ ಮಾತಾಡುತ್ತದೆಯೇ? ಅಥವಾ ಎರಡನ್ನೂ ಕುರಿತು ಮಾತಾಡುತ್ತದೆಯೇ? ಪ್ರವಾದನೆಯನ್ನು ನೋಡಿ ಯಾವ ವಚನಗಳು ಯಾವ ಘಟನೆಯ ಬಗ್ಗೆ ಮಾತಾಡುತ್ತವೆ ಎಂಬುದನ್ನು ಸರಿಯಾಗಿ ಗುರುತು ಮಾಡಿಕೊಳ್ಳೋಣ.

ಯೆಶಾಯ 11ನೇ ಅಧ್ಯಾಯದಲ್ಲಿ ಯೇಸುಕ್ರಿಸ್ತನ ಮೊದಲನೆ ಮತ್ತು ಎರಡನೆ ಬರೋಣದ ಎರಡನ್ನೂ ಒಟ್ಟಾಗಿ ಒಂದೇ ಚಿತ್ರದಲ್ಲಿ ಮಂಡಿಸಲಾಗಿದೆ. ಎರಡೂ ಸಹಾ ಒಂದರ ಭಾಗವೇ ಆಗಿರುವುದರಿಂದ ಒಂದು ಹಾಳೆಯ ಎರಡು ಮಗ್ಗಲುಗಳಂತೆ ಇವೆ. ರಕ್ಷಣೆಯ ಯೋಜನೆಯು ಪೂರ್ಣಗೊಳ್ಳುವುದಕ್ಕೆ ಕ್ರಿಸ್ತನ ಎರಡೂ ಆಗಮನಗಳು ಅವಶ್ಯಕವಾಗಿವೆ. ಒಂದನೇ ಆಗಮನ ಈಗಾಗಲೇ ಆಗಿಹೋಗಿದೆ. ಎರಡನೆಯಂದು ಕ್ರೈಸ್ತರೆಲ್ಲರ ನಿರೀಕ್ಷೆಯ ಮುಕ್ತಾಯಕ್ಕಾಗಿ ಇನ್ನೂ ಆಗಬೇಕಾಗಿದೆ ಅದಕ್ಕಾಗಿ ನಾವೆಲ್ಲರೂ ಕಾಯುತ್ತಿದ್ದೇವೆ.

ಯೇಸುಕ್ರಿಸ್ತನು ತನ್ನ ಎರಡನೇ ಬರೋಣದ ಬಗ್ಗೆ ನಾವು ಭರವಸೆಯನ್ನು ಹೊಂದಿಕೊಳ್ಳುವಂತೆ ಆತನು ತನ್ನ ಮೊದಲನೆ ಬರೋಣದಲ್ಲಿ ಏನನ್ನು ನೆರವೇರಿಸಿದ್ದಾನೆ? ಎರಡನೇ ಬರೋಣವು ಜರುಗದೆ ಹೋದರೆ ಮೊದಲನೆ ಬರೋಣದ ಉದ್ದೇಶವೇನು?

**ಗುರುವಾರ** **ಜನವರಿ 28**

## ನೀನು ನನ್ನನ್ನು ಸಂತೈಸಿದೆ (ಯೆಶಾಯ 12:1–6)

ಯೆಶಾಯ 12ನೇ ಅಧ್ಯಾಯವು ದೇವರನ್ನು ಆತನ ಕರುಣೆ ಮತ್ತು ಬಲಯುತವಾದ ಆದರಣೆ (ಸಂತೈಸುವಿಕೆ)ಗಾಗಿ ಕೊಂಡಾಡುವ ಒಂದು ಕೀರ್ತನೆಯಾಗಿದೆ. ಉಳಿದವನೊಬ್ಬನ ಬಾಯಿಂದ ಹೊರಡುವ ಈ ಕೀರ್ತನೆಯು ಯೆಹೂದ್ಯರು ಐಗುಪ್ತದೇಶದ ದಾಸತ್ವದಿಂದ ವಾಗ್ದತ್ತ ದೇಶಕ್ಕೆ ಹೋಗಲು ಬಿಡುಗಡೆಯಾದಾಗ ಅವರು ಮಾಡುವ ಕೊಂಡಾಟವನ್ನು ಹೋಲುತ್ತದೆ (ಯೆಶಾಯ 11:16). ಕೆಂಪು ಸಮುದ್ರದ ಬಳಿಯಲ್ಲಿ ಪರೋಹನ ಸೈನ್ಯದಿಂದ ಇಸ್ರಾಯೇಲ್ಯರನ್ನು ದೇವರು ರಕ್ಷಿಸಿದಾಗ ಮೋಶೆಯು ರಚಿಸಿ ಹಾಡಿದ ಜಯಗೀತೆಯಂತೆ ಇದೆ (ವಿ.ಕಾಂಡ 15ನೇ ಅಧ್ಯಾಯ ನೋಡಿರಿ).

ಈ ಗೀತೆಯನ್ನು ಯೆಶಾಯ 12ನೇ ಅಧ್ಯಾಯ ಮತ್ತು ಪ್ರಕಟನೆ 15:2–4 ರಲ್ಲಿರುವ ಮೋಶೆಯ ಮತ್ತು ಯಜ್ಞದ ಕುರಿಯಾದಾತನ ಹಾಡಿಗೆ ಹೋಲಿಸಿರಿ. ಈ ಎರಡೂ ಹಾಡುಗಳಲ್ಲಿ ದೇವರನ್ನು ಯಾವುದಕ್ಕೆ ಕೊಂಡಾಡುತ್ತೇವೆ?

ಯೇಸುಕ್ರಿಸ್ತನನ್ನು ವಿಮೋಚನನ್ನಾಗಿ ಗುರುತಿಸುವಿಕೆಯು ಹತ್ತಿರಕ್ಕೆ ಬಂದ ಸಂದರ್ಭದಲ್ಲಿ ಯೆಶಾಯ 12:2ನೇ ವಚನವು ಹೇಳುತ್ತದೆ. ಇದು "**ದೇವರು ನನ್ನ ರಕ್ಷಣೆಯಾಗಿದ್ದಾನೆ**" ಮತ್ತು ಆತನೇ ನನಗೆ ರಕ್ಷಕನಾದನು ಎಂದು ಹೇಳುತ್ತದೆ. "**ಯೇಸು ಎಂಬ ಹೆಸರಿನ ಅರ್ಥವೇನೆಂದರೆ ಕರ್ತನು ನನ್ನ ರಕ್ಷಣೆ**" (ಮತ್ತಾಯ 1:21ಕ್ಕೆ ಹೋಲಿಸಿರಿ).

"ಕರ್ತನು ರಕ್ಷಣೆಯಾಗಿದ್ದಾನೆ" ಎಂಬ ಅರ್ಥವನ್ನು ಹೊಂದಿರುವ "ಯೇಸು" ಎಂಬ ಹೆಸರಿನಲ್ಲಿ ಯಾವ ಮಹತ್ವದ ಆಲೋಚನೆಯಿದೆ?

ದೇವರು ರಕ್ಷಣೆಯನ್ನು ಅನುಗ್ರಹಿಸುವುದು ಮಾತ್ರವಲ್ಲ (ಯೆಶಾಯ 12:2). ಆದರೆ ಆತನೇ ರಕ್ಷಣೆಯಾಗಿದ್ದಾನೆ. ಇಸ್ರಾಯೇಲ್ಯರ ಸದಮಲಸ್ವಾಮಿಯು (ಪರಿಶುದ್ಧವಾದ ದೇವರು) ನಮ್ಮ ಮಧ್ಯದಲ್ಲಿ ಇರುವುದೇ ನಮಗೆ ಎಲ್ಲವೂ ಆಗಿದೆ. ಯೇಸುಕ್ರಿಸ್ತನು ಅದ್ಭುತಗಳನ್ನು ಮಾಡಿದರು ಮಾತ್ರವಲ್ಲ ಆತನು ರಕ್ತ ಮಾಂಸಧಾರಿಯಾಗಿ (ನರಾವತಾರವೆತ್ತಿ) ನಮ್ಮ ಮಧ್ಯೆ ವಾಸಿಸಿದನು (ಯೋಹಾನ 1:14). ಆತನು ನಮ್ಮ ಪಾಪಗಳನ್ನು ಹೊತ್ತನು ಮಾತ್ರವಲ್ಲ ನಮಗಾಗಿ ಪಾಪಸ್ವರೂಪಿಯಾದನು (2 ಕೊರಿಂಥ 5:21).

ಆತನು ನಮ್ಮ ಸಮಾಧಾನ ಕರ್ತೃ ಮಾತ್ರವಲ್ಲ ನಮ್ಮ ಸಮಾಧಾನವೇ ಆಗಿದ್ದಾನೆ (ಎಫೆಸ 2:14).

ಇಷಯನ ಅಂಕುರವು ಜನಾಂಗಗಳಿಗೆ ಸಂಕೇತವಾಗಿ ನಿಂತಿರುವುದು ಆಶ್ಚರ್ಯವಾದುದೇನಲ್ಲ (ಯೆಶಾಯ 11:10). ಆತನು ಶಿಲುಬೆಯ ಮೇಲೆ ಏರಿಸಲ್ಪಟ್ಟಾಗ ಎಲ್ಲರನ್ನೂ ತನ್ನ ಕಡೆಗೆ ಎಳೆದುಕೊಳ್ಳುವನು (ಯೋಹಾನ 12:32). ಉಳಿದವರು ಪರಾಕ್ರಮಿಯಾದ ದೇವರ ಕಡೆ ತಿರುಗಿಕೊಳ್ಳುವರು (ಯೆಶಾಯ 10:21). ಆತನು 'ಸಮಾಧಾನ ಪ್ರಭು' ನಮಗಾಗಿ ಹುಟ್ಟಿದ ವರದ ಮಗನು (ಯೆಶಾಯ 9:6).

ಯೇಸುಕ್ರಿಸ್ತನು ನಮ್ಮ ರಕ್ಷಣೆಯಾಗಿದ್ದಾನೆ ಎಂಬ ಆಲೋಚನೆಯ ಮೇಲೆ ಹೆಚ್ಚಾಗಿ ಚಿಂತನೆ ಮಾಡೋಣ. ಯೇಸುಕ್ರಿಸ್ತನಲ್ಲಿ ನಮಗೆ ಬಿಡುಗಡೆ ಇದೆ. ಆತನಲ್ಲಿ ಮಾತ್ರ ನಮ್ಮ ವಿಮೋಚನೆಯಾಗುತ್ತದೆ. ನಾವು ಆ ವಿಮೋಚನೆಯಲ್ಲಿ

ನಿತ್ಯವಾದ ಪಾಲನ್ನು ದೇವರ ಕರುಣೆಯಿಂದ ಮತ್ತು ಕೃಪೆಯಿಂದ ಪಡೆದುಕೊಳ್ಳುತ್ತೇವೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಆತನಲ್ಲಿರುವ ವಿಮೋಚನೆಯು ನಮ್ಮ ಒಳ್ಳೆಯ ಕೆಲಸಗಳಿಂದ ಆಗುವುದಿಲ್ಲ. ಆದರೆ ಆತನ ಮೇಲೆ ನಾವು ಇಡುವ ನಂಬಿಕೆಯಿಂದಲೇ ಯಾಕೆಂದರೆ ನಮ್ಮ ಯಾವ ಒಳ್ಳೆಯ ಕೆಲಸಗಳೂ ನಮ್ಮನ್ನು ವಿಮೋಚಿಸುವಷ್ಟು ಒಳ್ಳೆಯವುಗಳಾಗಿರುವುದಿಲ್ಲ. ಯೇಸುಕ್ರಿಸ್ತನು ಮಾಡುವ ಕ್ರಿಯೆಯಿಂದ ಅಂದರೆ ಆತನ ಮೇಲೆ ನಾವು ಇಡುವ ನಂಬಿಕೆಯಿಂದ ಆತನು ಮಾಡಿದ ಕ್ರಿಯೆಯು ನಮ್ಮ ಲೆಕ್ಕಕ್ಕೆ ಬರುವುದರಿಂದ ನಮಗೆ ವಿಮೋಚನೆಯಾಗುತ್ತದೆ. ಈ ಒಂದು ಸತ್ಯವು ನಾವು ನಮ್ಮ ಅಯೋಗ್ಯತನದ ಭಾವನೆಯಲ್ಲಿ ಮುಳುಗಿ ಹೋಗಿದ್ದರೂ ರಕ್ಷಣೆಯ ಭರವಸೆಯನ್ನು ಮತ್ತು ನಿರೀಕ್ಷೆಯನ್ನು ಹೇಗೆ ಕೊಡುತ್ತದೆ?

**ಶುಕ್ರವಾರ** **ಜನವರಿ 29**

**ಹೆಚ್ಚಿನ ಚಿಂತನೆ :** "ಒಬ್ಬ ತಂದೆಯು (ಮಾನವ ತಂದೆ) ತನ್ನ ಮಗನಿಗೋಸ್ಕರ ಹಂಬಲಿಸುತ್ತಾನೆ. ಆತನು ತನ್ನ ಮಗನ ಮುಖವನ್ನು ನೋಡುತ್ತಾ ಮಗನ ಜೀವಕ್ಕಿರುವ ಅಪಾಯವನ್ನು ನೆನೆಸಿ ನಡುಗುತ್ತಾನೆ. ಆತನು ತನ್ನ ಮುದ್ದು ಮಗನನ್ನು ಸೈತಾನನ ಶಕ್ತಿಗೆ ತುತ್ತಾಗದಂತೆ ಕಾಪಾಡಲು ಹಾಗು ಸೈತಾನನ ಶೋಧನೆ ಮತ್ತು ಕೇಡಿನಿಂದ ತಪ್ಪಿಸಲು ಹಾತೊರೆಯುತ್ತಾನೆ. ಆದರೆ ತಂದೆಯಾದ ದೇವರು ಘೋರವಾದ ಸಂಘರ್ಷವನ್ನು ಮತ್ತು ಅತಿಭಯಂಕರವಾದ ಗಂಡಾಂತರವನ್ನು ಮುಕ್ತಾಯ ಮಾಡಲು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಅದರಿಂದ ನಮ್ಮ ನಮ್ಮ ಚಿಕ್ಕಮಕ್ಕಳಿಗೆ ಜೀವದ ಹಾದಿಯನ್ನು ಖಚಿತಪಡಿಸಿದ್ದಾನೆ. 'ಇದರಲ್ಲಿ ಆತನ ಪ್ರೀತಿಯುತುಂಬಿದೆ'. ಓ ಆಕಾಶವೇ ಇದಕ್ಕೆ ವಿಸ್ಮಯಪಡು! ಓ ಭೂಮಿಯೇ ಇದಕ್ಕೆ ಆಶ್ಚರ್ಯಪಡು!' – ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್, ಪುಟ 49.

"ಯೇಸುಕ್ರಿಸ್ತನು ಮನುಷ್ಯನ ರಕ್ಷಣೆಗೆ ಅವಶ್ಯಕವಾದ ಷರತ್ತುಗಳನ್ನು ಪೂರೈಸಲು ಒಪ್ಪಿಗೆ ಕೊಟ್ಟವನು. ಯಾವ ದೇವದೂತನೆಯಾಗಲೀ ಮನುಷ್ಯನೇ ಆಗಲಿ ಮಾಡಬೇಕಾದ ಮಹಾಕಾರ್ಯಕ್ಕೆ ಅಸಮರ್ಪಕನಾಗಿದ್ದಾನೆ

(ಅಸಮರ್ಥನಾಗಿದ್ದಾನೆ). ಮನುಷ್ಯಕುಮಾರನು ಮಾತ್ರ ಎತ್ತಲ್ಪಡಬೇಕು: ವಿಮೋಚನಾ ಪ್ರಕ್ರಿಯೆಯನ್ನು ಅನಂತ ಗುಣಸ್ವಭಾವವನ್ನು ಹೊಂದಿರುವಾತನು ಮಾತ್ರ ನಿರ್ವಹಿಸಬಲ್ಲನು. ದ್ರೋಹಿಯಾದ ಮತ್ತು ಪಾಪಿಯಾದ ಮನುಷ್ಯನ ಕೈ ಹಿಡಿಯುವುದಕ್ಕೆ ಮನುಷ್ಯ ಸ್ವಭಾವದಲ್ಲಿ ಪಾಲುಹೊಂದುವುದಕ್ಕೆ, ತನ್ನ ಸ್ವಂತ ರಕ್ತವನ್ನು ಸುರಿಸುವುದಕ್ಕೆ ಮತ್ತು ತನ್ನ ಆತ್ಮವನ್ನು ಪಾಪಿಗೆ ಯಜ್ಞವಾಗಿ ಸಮರ್ಪಿಸಲುವುದಕ್ಕೆ ಕ್ರಿಸ್ತನು ಮಾತ್ರ ಒಪ್ಪಿದನು. ಪರಲೋಕದ ಸಮಾಲೋಚನೆಯಲ್ಲಿ ಮನುಷ್ಯನ ಅಪರಾಧವು ಅಳಿಯಲ್ಪಟ್ಟಿತು. ಪಾಪದ ದೆಸೆಯಿಂದ ಉಂಟಾಗುವ ದೈವಕೋಪವು ಎಷ್ಟೆಂದು ತೂಗಲ್ಪಟ್ಟಿತು. ಆದಾಗ್ಯೂ ಕ್ರಿಸ್ತನು, ಎಡವಿದ ಮಾನವಕುಲಕ್ಕೆ ನಿರೀಕ್ಷೆಯು ಎಟಕುವಂತೆ ಮಾಡಲು ಬೇಕಾದ ಷರತ್ತುಗಳನ್ನು ಪೂರೈಸಲು ಜವಾಬ್ದಾರಿಯನ್ನು ಹೊರಲು ತನ್ನ ನಿರ್ಧಾರವನ್ನು ಪ್ರಕಟಿಸಿದನು" – ಎಲೆನ್ ಜಿ ವೈಟಮ್ಮನವರ... ದಿ ಸೈನ್ಸ್ ಆಫ್ ದಿ ಟೈಮ್ಸ್, 5ನೇ ಮಾರ್ಚ್ 1896.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯೆಶಾಯ 11ನೇ ಅಧ್ಯಾಯವು ಯೇಸುಕ್ರಿಸ್ತನ ಎರಡೂ ಬರೋಣಗಳನ್ನು ಒಂದೇ ಚಿತ್ರದಲ್ಲಿ ಮಂಡಿಸಿದೆ. ಕೆಲವು ಯೆಹೂದ್ಯರು ಯೇಸುಕ್ರಿಸ್ತನ ಮೊದಲ ಬರೋಣವನ್ನು ಯಾಕೆ ಒಪ್ಪುವುದಿಲ್ಲ ಎಂಬುದನ್ನು ಸ್ವಲ್ಪ ಮಟ್ಟಿಗಾದರೂ ವಿವರಿಸುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ಅವರು ಯೇಸುಕ್ರಿಸ್ತನ ಎರಡನೇ ಬರೋಣದಲ್ಲಿ ನಡೆಯಬೇಕಾಗಿರುವ ಘಟನೆಗಳನ್ನು ಮೊದಲನೆ ಬರೋಣದಲ್ಲಿ ನಡೆಯಬೇಕೆಂದು ನಿರೀಕ್ಷೆ ಮಾಡುವುದರಿಂದ ಮತ್ತು ಅವುಗಳು ಇನ್ನೂ ನಡೆದಿಲ್ಲುವುದರಿಂದ ಮೊದಲನೆ ಬರೋಣವೇ ಆಗಿಲ್ಲವೆಂದು ಅಭಿಪ್ರಾಯ ಹೊಂದಿದ್ದಾರೆ. ಆದುದರಿಂದ ಯೇಸುಕ್ರಿಸ್ತನ ಆಗಮನದ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಹೊಂದಿರುವುದು ಎಷ್ಟು ಮುಖ್ಯವಾಗಿದೆ? ಉದಾಹರಣೆಗೆ ಆತನ ಎರಡನೇ ಬರೋಣದ ಬಗ್ಗೆ ಇರುವ ತಪ್ಪು ಅಭಿಪ್ರಾಯಗಳು ಜನರನ್ನು ಹೇಗೆ ಅಂತ್ಯಕಾಲದಲ್ಲಿ ಸೈತಾನನ ಮಹಾವಂಚನೆಗೆ ಒಳಪಡಿಸುತ್ತವೆ?– ಎಲೆನ್ ಜಿ ವೈಟಮ್ಮನವರ ಮಹಾಹೋರಾಟ, 19ನೇ ಅಧ್ಯಾಯ.

**ಸಾರಾಂಶ:** ಯೆಶಾಯನ ಕಾಲದಲ್ಲಿ ಯೆಶಾಯನ ಹೆಸರಿಗೆ "ಕರ್ತನ ರಕ್ಷಣೆ" ಎಂದು ಅರ್ಥವಿತ್ತು. ಧರ್ಮಭ್ರಷ್ಟತೆಯ ಫಲಿತಾಂಶವಾಗಿ ಯೆಹೂದ್ಯರು ಅನ್ಯರ ಆಳ್ವಿಕೆಗೆ ಒಳಪಟ್ಟಾಗ ದೇವರು ಉಳಿದ ಜನರಿಗೆ ತನ್ನ ರಕ್ಷಣೆಯನ್ನು ವಾಗ್ದಾನ ಮಾಡಿದನು. ಈ ನಿರೀಕ್ಷೆಯ ಪ್ರವಾದನೆಯ ಅಂತಿಮ ನೆರವೇರಿಕೆಯನ್ನು ಯೇಸುಕ್ರಿಸ್ತನಲ್ಲಿ ಕಾಣುತ್ತೇವೆ. ಆತನ ಹೆಸರಿಗೆ ಕರ್ತನು ನನ್ನ ರಕ್ಷಕನು ಎಂಬ ಅರ್ಥವಿದೆ.